**D**

**CCE PR**
**UNREVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 06. 2019 ] **ಸಂಕೇತ ಸಂಖ್ಯೆ : 62-K**

Date : 28. 06. 2019 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಅಮೆರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿಯ ವೇಳೆ ತಂಗುವಂತಿಲ್ಲ ಏಕೆ ?<br>***ಉತ್ತರ :***<br>ಅಮೆರಿಕಾದಲ್ಲಿ ರಾತ್ರಿ ವೇಳೆ ಸಾರ್ವಜನಿಕ ಸ್ಥಳಗಳಲ್ಲಿ ತಂಗಿದ್ದೇ ಆದರೆ ಅಲೆಮಾರಿಗಳೆಂದು ಅವರನ್ನು ಲಾಕಪ್ಪಿಗೆ ಹಾಕುತ್ತಾರೆ. ಆದ್ದರಿಂದ ತಂಗುವ ಹಾಗಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಅಷ್ಟಾದಶಾಕ್ಷರೀ ಮಂತ್ರ ಯಾವುದು ?<br>***ಉತ್ತರ :***<br>ಅಷ್ಟಾದಶಾಕ್ಷರೀ ಮಂತ್ರ ಯಾವುದೆಂದರೆ, ವಸುಧಾವಳಯ ವಿಲೀನವಿಶದ ವಿಷಯ ವಿಶೇಷಂ. | |
| 3. | ಕರ್ನಾಟಕದ ವಿಶಿಷ್ಟ ಗುಣ ಯಾವುದು ?<br>***ಉತ್ತರ :***<br>ಜಿ.ಪಿ. ರಾಜರತ್ನಂ ತಿಳಿಸಿರುವಂತೆ ಕರ್ನಾಟಕದ ವಿಶಿಷ್ಟ ಗುಣ 'ಭಾಷಾ ಸಾಮರಸ್ಯ'. | |
| 4. | ಅನಿಲ್ ಕುಂಬ್ಳೆಯವರು ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ಸಾಧಿಸಿದ ವಿಶ್ವದಾಖಲೆ ಯಾವುದು ?<br>***ಉತ್ತರ :***<br>ಅನಿಲ್ ಕುಂಬ್ಳೆಯವರು ಫಿರೋಜ್ ಷಾ ಕೋಟಾ ಮೈದಾನದಲ್ಲಿ ಸಾಧಿಸಿದ ವಿಶ್ವದಾಖಲೆ ಪಾಕಿಸ್ತಾನದ ವಿರುದ್ಧ ಒಂದೇ ಇನ್ನಿಂಗ್ಸ್‌ನಲ್ಲಿ 10 ವಿಕೆಟ್ ಪಡೆದದ್ದು. | |
| 5. | ಅನಿಲ್ ಕುಂಬ್ಳೆಯವರು ಕ್ರಿಕೆಟ್ ಮಾತ್ರವಲ್ಲದೆ ಇನ್ನಾವ ಕಲೆಯಲ್ಲಿ ಹೆಸರು ಮಾಡಿದ್ದರು ?<br>***ಉತ್ತರ :***<br>ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕ್ಷೇತ್ರದಲ್ಲಿ ಮಾತ್ರವಲ್ಲದೆ, ವನ್ಯಜೀವಿ ಛಾಯಾ ಚಿತ್ರಗ್ರಾಹಕರಾಗಿ ಹೆಸರು ಮಾಡಿದ್ದರು. | |
| 6. | ಅನಿಲ್ ಕುಂಬ್ಳೆಯವರು ಭಾರತೀಯ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದುದು ಯಾವಾಗ ?<br>***ಉತ್ತರ :***<br>ಅನಿಲ್ ಕುಂಬ್ಳೆಯವರು 1990 ರಲ್ಲಿ ಇಂಗ್ಲೆಂಡ್ ಪ್ರವಾಸ ಮಾಡಿದ ಭಾರತದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದರು. | |
| 7. | ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ ?<br>***ಉತ್ತರ :***<br>ಶಿವಾಜಿಯ ಸೈನಿಕರು ಸುತ್ತಮುತ್ತಲಿನ ಹಳ್ಳಿಗರ ಹಸು, ಎಮ್ಮೆಗಳನ್ನು ಅಪಹರಿಸಿಕೊಂಡು ಅವರಿಗೆ ಕಿರುಕುಳ ಕೊಡುತ್ತಿರುವುದನ್ನು ಕೇಳಿ ದೇಸಾಯಿ ಈಶಪ್ರಭು ಕಿಡಿಕಿಡಿಯಾದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಕೋಗಿಲೆಯ ಹಾಡಿನ ತರಂಗಗಳ ಪರಿಣಾಮ ಏನಾಗಿದೆ ?<br>*ಉತ್ತರ :*<br>ಕೋಗಿಲೆಯ ಹಾಡಿನ ತರಂಗಗಳ ಪರಿಣಾಮದಿಂದ ಮನಸ್ಸಿನ ಭಾವನೆಗಳು ಮೂಕವಾಗಿ, ಮಾನವ ಲೋಕವು ದೇವಲೋಕದ ಹಾಗೆ ಪರಿವರ್ತನೆಗೊಂಡಂತಾಗಿದೆ. | |
| 9. | ಕೆ.ಎಸ್. ನಿಸಾರ್ ಅಹಮದ್‌ರವರು ಎಲ್ಲಾ ಧರ್ಮಗಳ ಉಸಿರು ಒಂದೇ ಎಂದು ಹೇಳಿರುವುದು ಏಕೆ ?<br>*ಉತ್ತರ :*<br>ಧರ್ಮದ ಆಚರಣೆಗಳು ಬೇರೆ ಬೇರೆಯಾಗಿದ್ದರೂ ಎಲ್ಲಾ ಧರ್ಮಗಳ ತತ್ವ ಒಂದೇ ಆದ್ದರಿಂದ ಧರ್ಮದ ಉಸಿರು ಒಂದೇ ಎಂದು ಕೆ.ಎಸ್. ನಿಸಾರ್ ಅಹಮದ್‌ರವರು ಹೇಳಿದ್ದಾರೆ. | |
| 10. | ರೈತನಿಗೆ ಮೋಡಗಳು ಹೇಗೆ ಕಾಣುತ್ತಿದ್ದವು ?<br>*ಉತ್ತರ :*<br>ರೈತನಿಗೆ ಮೋಡಗಳು ಗೋಡೆಗೆ ಕಪ್ಪು ಬಣ್ಣ ಬಳಿದ ಹಾಗೆ ಕಾಣುತ್ತಿದ್ದವು. | |
| 11. | ಕೇಡಾದ ನಂತರ ಯಾವುದರ ಚಿಂತೆಯೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ ?<br>*ಉತ್ತರ :*<br>ಕೇಡಾದ ನಂತರ ಮರಣದ ಚಿಂತೆ ಎಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ | |
| 12. | ಯಾರ ಚಿಂತೆಯಲ್ಲಿ ಇದ್ದವರನ್ನು ಕಾಣಲಿಲ್ಲವೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ ?<br>*ಉತ್ತರ :*<br>ಶಿವನ ಚಿಂತೆಯಲ್ಲಿ ಇದ್ದವರನ್ನು ಕಾಣಲಿಲ್ಲವೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 13. | ಎಂಥವನು ಮಗನಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ ?<br>***ಉತ್ತರ :***<br>ವಿನಯ ಇಲ್ಲದಿರುವವನು ಮಗನಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ. | |
| 14. | ಎಂಥವನು ಋಷಿಯಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ ?<br>***ಉತ್ತರ :***<br>ಪರಿಶುದ್ಧತೆ ಇಲ್ಲದವನು ಋಷಿಯಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ. | |
| 15. | ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಏಕೆ ಬಂದನು ?<br>***ಉತ್ತರ :***<br>ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಕಲಶ ಕೂಡಿಸಲು ಬಂದನು. | |
| 16. | ಧರ್ಮಪದನು ಯಾವ ನದಿಯ ತೀರದ ಕಡೆಗೆ ಓಡಿಹೋದನು ?<br>***ಉತ್ತರ :***<br>ಧರ್ಮಪದನು ಚಂದ್ರಭಾಗ ನದಿಯ ತೀರದ ಕಡೆಗೆ ಓಡಿಹೋದನು. | |
| | **ಮೂರು-ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 17. | ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?<br>***ಉತ್ತರ :***<br>ಹಿಂದಿನ ಕರ್ನಾಟಕದ ಜನ ತಮ್ಮ ಅನನ್ಯವಾದ ಗುಣದಿಂದ ತಮ್ಮ ದೇಶವನ್ನು ದೊಡ್ಡದೆನಿಸಿದರು. ಅಂಥ ದೇಶವನ್ನು ಪಿತ್ರಾರ್ಜಿತವಾಗಿ ಪಡೆದಿರುವ ನಾವು ಅವರ ದೊಡ್ಡ ಗುಣಗಳನ್ನು ಬೆಳೆಸಿದಾಗ ಮಾತ್ರ ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುತ್ತೇವೆ. | |
| 18. | ನಿವೃತ್ತಿಯ ನಂತರವೂ ಕುಂಬ್ಳೆಯವರು ಕ್ರಿಕೆಟ್ ಸಂಪರ್ಕವನ್ನು ಹೇಗೆ ಉಳಿಸಿಕೊಂಡರು ?<br>***ಉತ್ತರ :***<br>ನಿವೃತ್ತಿಯಾದ ನಂತರ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಚುನಾಯಿತ ಅಧ್ಯಕ್ಷರಾಗಿ ಕ್ರಿಕೆಟ್ ವಿಶಾಲ ಕ್ಷೇತ್ರದ ಸೇವೆಯಲ್ಲಿ ತೊಡಗಿದರು. ಅಲ್ಲದೆ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿ ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯ ಎರಡನೇ ವರ್ಷವೇ ಸ್ವತಃ ಅತೀ ಹೆಚ್ಚು ವಿಕೆಟ್ ಪಡೆದ ಎರಡನೆಯ ಬೌಲರಾದ ಹಿರಿಮೆಯೂ ಮೂರನೆಯ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿಯೂ ಇವರದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | ರಾಮಸಿಂಗನಿಗೂ–ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.<br>*ಉತ್ತರ :*<br>ರಾಮಸಿಂಗನು ಸ್ವಯಂ ಸೇವಕರೊಂದಿಗೆ ಜಯಕಾರ ಹಾಕುತ್ತಾ ಬಂದಾಗ ಸಿಪಾಯಿಗಳು ಅವರನ್ನು ತಡೆದು ಇಲ್ಲಿ ಯಾವುದೇ ಸಭೆ ಸಮಾರಂಭ ಮಾಡಲು ನಿಷೇಧ ಹೇರಲಾಗಿದೆ ಎಂದು ಹೇಳಿದಾಗ ಅದನ್ನು ತೀವ್ರವಾಗಿ ವಿರೋಧಿಸಿ ನಿಷೇಧವನ್ನು ಹೇರಲು ನೀವಾರು ಬ್ರಿಟಿಷರಲ್ಲ, ಅವರ ಗುಲಾಮರು, ನಾಡಿನ ಜನರು ಒಪ್ಪದೇ ಇದ್ದರೆ ಇಲ್ಲಿ ಬ್ರಿಟಿಷರ ಆಟ ನಡೆಯುವುದಿಲ್ಲವೆಂದೂ ಕುಲಕರ್ಣಿಯ ವಿರುದ್ಧ ರಾಮಸಿಂಗನು ಉದ್ಧಟತನದಿಂದ ಮಾತನಾಡಿದಾಗ, ಸಿಪಾಯಿಯು ನೀನು ಯಾರೊಡನೆ ಮಾತನಾಡುತ್ತಿದ್ದೀಯ ಎಂಬ ಎಚ್ಚರಿಕೆ ಇರಲಿ ಎಂದು ಎಚ್ಚರಿಸಿದನು. | |
| 20. | ತುಳಜಾಬಾಯಿ ಮತ್ತು ಕುಲಕರ್ಣಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>*ಉತ್ತರ :*<br>ತುಳಜಾಬಾಯಿ ತನ್ನ ಮಗ ಸತ್ತ ವಿಷಯ ತಿಳಿದು ಮಗನನ್ನು ಕಾಣಲು ಓಡಿ ಬಂದು ಆತನ ದೇಹದ ಮೇಲೆ ಬಿದ್ದು ಪ್ರಲಾಪಿಸುತ್ತಾ ಇವರು ನಿನ್ನ ಕೈಯಲ್ಲಿರುವ ಧ್ವಜವನ್ನು ಕಸಿದು ಕೊಂಡದ್ದಕ್ಕಾಗಿ ನಿನಗೆ ಧ್ವಜವನ್ನು ನೀಡುತ್ತಿದ್ದೇನೆ ತೆಗೆದುಕೋ ಎಂದು ಹೇಳಿದಾಗ ಕುಲಕರ್ಣಿಯು ತುಳಜಾಬಾಯಿಯನ್ನು ಕುರಿತು ನಿನ್ನ ಕೈಯಲ್ಲಿರುವ ಧ್ವಜವನ್ನು ಕೆಳಗಿಡು ಎಂದು ಎಚ್ಚರಿಸಿದಾಗ, ತುಳಜಾಬಾಯಿಯು ಮಗನನ್ನೇ ಬಲಿ ಕೊಟ್ಟಿರುವೆ ನನ್ನ ಪ್ರಾಣವನ್ನು ನಾನು ತ್ಯಜಿಸಲು ಸಿದ್ಧನಿದ್ದೇನೆಯೇ ಹೊರತು ಧ್ವಜವನ್ನು ಕೆಳಗಿಡಲಾರೆ ಎಂದು ತೀವ್ರವಾಗಿ ಪ್ರತಿಭಟಿಸಿದಳು. | |
| 21. | ಕೆಳದಿಯ ರಾಣಿ ಚೆನ್ನಮ್ಮ ಮೊಘಲರ ಅಜಮತಾರನನ್ನು ಹೇಗೆ ಎದುರಿಸಿದಳು ?<br>*ಉತ್ತರ :*<br>ಅಜಮತಾರನು ಕೆಳದಿಯ ಮೇಲೆ ದಂಡೆತ್ತಿ ಬಂದಾಗ, ರಾಣಿ ಚೆನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು. ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟುದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಘಲ್ ಸೇನೆಗೆ ಅನ್ನನೀರು ಸಿಗದಂತೆ ಮಾಡಿದಳು. ಮೊಘಲ್ ಸೇನೆ ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲು ಆಗದೆ ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣಭೀತಿಯಿಂದ ಪಲಾಯನ ಗೈದರು. ಹೀಗೆ ಕೆಳದಿಯ ರಾಣಿ ಚೆನ್ನಮ್ಮ ಆಜಮತಾರನನ್ನು ಎದುರಿಸಿದಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಕಸ್ತೂರಿಯವರ ಆರಂಭಿಕ ಜೀವನ ಹೇಗೆ ನಡೆಯಿತು ?<br>***ಉತ್ತರ :***<br>ಕಸ್ತೂರಿಯವರು ಮಹಾರಾಜರು ನಡೆಸುತ್ತಿದ್ದ ಭೋಜನಾಲಯದಲ್ಲಿ ಜಾಗಗಿಟ್ಟಿಸಿಕೊಂಡು ಪ್ರೌಢ, ಇಂಟರ್‌ಮೀಡಿಯಟ್ ಮತ್ತು ಕಾಲೇಜು ಶಿಕ್ಷಣ ಪೂರೈಸಿದರು. ಬಿ.ಎ.ಯಲ್ಲಿ ಪ್ರಥಮ ಸ್ಥಾನಗಳಿಸಿದ ನಂತರ ದಾಮೋದರ್ ಪೊಟ್ಟಿ ಎಂಬುವವರ ಪತ್ರಿಕೆಗೆ ಘೋಸ್ಟ್ ರೈಟರ್ ಆಗಿ ಬಿಟ್ಟಿ ಮನೆಯನ್ನೂ, ಆ ಮನೆಯ ಕಾಂಪೌಂಡಿನ ತೆಂಗಿನ ಫಸಲನ್ನೂ, ತಿಂಗಳಿಗೆ ಹದಿನೈದು ರೂಪಾಯಿಯ ಸಂಭಾವನೆಯನ್ನು ಪಡೆಯುತ್ತ ತಮ್ಮ ಆರಂಭಿಕ ಜೀವನವನ್ನು ನಡೆಸಿದರು. | |
| 23. | ಕಸ್ತೂರಿಯವರಿಗೆ ಸಂಕಟದ ವಿಷಯವಾದುದು ಯಾವುದು ?<br>***ಉತ್ತರ :***<br>ಒಮ್ಮೆ ಕಸ್ತೂರಿಯವರು ಅನಾರೋಗ್ಯ ನಿಮಿತ್ತ ವೈದ್ಯರ ಬಳಿಗೆ ಹೋದಾಗ ಮಲ ಪರೀಕ್ಷೆಗೆ ಮಲವನ್ನು ಸಂಗ್ರಹಿಸಿಕೊಂಡು ಬರಲು ಸೂಚಿಸಿದರು. ಹಾಗೆಯೇ ಮಾರನೆಯ ದಿನ ಒಂದು ಡಬ್ಬಿಯಲ್ಲಿ ಮಲವನ್ನು ಸಂಗ್ರಹಿಸಿ ಅದರ ಮೇಲೆ ಕಸ್ತೂರಿ ಎಂಬ ತಮ್ಮ ಹೆಸರನ್ನು ಬರೆಯಬೇಕಾಗಿ ಬಂದಾಗ, ಒಳಗಿರುವ ವಸ್ತುವಿಗೂ ಅದರ ಮೇಲಿರುವ ಹೆಸರಿಗೂ ಹೊಂದಾಣಿಕೆ ಆಗದಿದ್ದುದನ್ನು ಕಂಡಾಗ ಅವರಿಗೆ ಸಂಕಟದ ವಿಷಯವಾಗಿ ಪರಿಣಮಿಸಿತು. | |
| 24. | ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು ?<br>***ಉತ್ತರ :***<br>ಸುಡುವ ಬಾಣ ಬಿರುಸುಗಳು ಬೇರೆ ಬೇರೆಯಾಗಿದ್ದರೂ ಅವುಗಳ ಬೆಳಕಿನ ಸತ್ವ ಒಂದೇ ಸಾಹಿತ್ಯದ ಪ್ರಕಾರಗಳು ಬೇರೆ ಬೇರೆಯಾಗಿದ್ದರೂ ಕವಿತ್ವದ ಸತ್ವ ಒಂದೇ ಆಗಿರುವಂತೆ ನಾವೆಲ್ಲರೂ ಬೇರೆ ಬೇರೆ ಬಣ್ಣ, ಗುಣ, ಧರ್ಮ, ಆಚಾರ, ವಿಚಾರಗಳಿಂದ ಕೂಡಿರುವರಾಗಿದ್ದರೂ ನಾವೆಲ್ಲರೂ ಒಂದೇ ಎಂದು ಕೆ.ಎಸ್ ನಿಸಾರ್ ಅಹಮದ್ ಹೇಳಿದ್ದಾರೆ. | |
| 25. | ಮನುಷ್ಯ ಹೊಸ ಮನುಷ್ಯನಾಗುವುದು ಹೇಗೆ ?<br>***ಉತ್ತರ :***<br>ಅಕ್ಷರ ಜ್ಞಾನವನ್ನು (ವಿದ್ಯೆ) ನಮ್ಮದಾಗಿಸಿಕೊಂಡಾಗ ಅದು ನಮ್ಮ ಜೀವನದ ಎಲ್ಲಾ ಕಷ್ಟ ಕಾರ್ಪಣ್ಯಗಳನ್ನು ಕಳೆಯುತ್ತದೆ. ಇದರಿಂದ ನಮ್ಮ ದಾಸ್ಯ ಸಂಕೋಲೆ ಕಳಚಿ ಬಿದ್ದು ನಾವು ಹೊಸ ಮನುಷ್ಯರಾಗುತ್ತೇವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ದೇಶದ ಪ್ರಗತಿ ಯಾವಾಗ ಸಾಧ್ಯವೆಂದು ಬಿ.ಆರ್. ಲಕ್ಷ್ಮಣರಾವ್‌ರವರು ತಿಳಿಸಿದ್ದಾರೆ ?<br>***ಉತ್ತರ :***<br>ಅಕ್ಷರ ಜ್ಞಾನವನ್ನು ನಾವು ಆರ್ಜಿಸಿಕೊಂಡಾಗ ನಾವು ಹನುಮನಂತೆ ವಿಕಾಸಗೊಳ್ಳುತ್ತೇವೆ. ನಮ್ಮಲ್ಲಿರುವ ನಮ್ಮ ಶಕ್ತಿಯನ್ನು ನಾವು ಅರಿತುಕೊಂಡು, ದೇಶಕ್ಕೆ ಬೆನ್ನೆಲುಬಾಗಿ ನಿಂತಾಗ ಮಾತ್ರ ದೇಶವು ಪ್ರಗತಿಯನ್ನು ಸಾಧಿಸುತ್ತದೆ ಎಂದು ಬಿ.ಆರ್. ಲಕ್ಷ್ಮಣರಾವ್‌ರವರು ತಿಳಿಸಿದ್ದಾರೆ. | |
| 27. | ಮಾಯಾ ದೀಪ ಪದ್ಯದಲ್ಲಿ ತಿಳಿಸಿರುವಂತೆ ಅಕ್ಷರ ಜ್ಞಾನದಿಂದ ದೊರೆಯುವ ಲಾಭಗಳಾವುವು ?<br>***ಉತ್ತರ :***<br>ಅಕ್ಷರ ಜ್ಞಾನವನ್ನು (ವಿದ್ಯೆ) ವಶಪಡಿಸಿಕೊಂಡರೆ ಅದೊಂದು ಅದ್ಭುತವಾದ ಅಲ್ಲಾದೀನನ ಮಾಯಾದೀಪದಂತೆ. ಅದರಿಂದ ನಾವು ನಮ್ಮ ಜೀವನದಲ್ಲಿ ಹೊಸಜೀವನ ಹೊಸ ರೂಪವನ್ನು ಪಡೆಯಬಹುದು. ಅದರಿಂದ ನಾವು ಪ್ರಪಂಚವನ್ನು ಸಂಚಾರ ಮಾಡಲು ಸಹಾಯ ಮಾಡುತ್ತದೆ. ನಾವು ಇನ್ನೊಬ್ಬರ ದಾಸ್ಯತ್ವದಿಂದ ಹೊರಬಂದು ನಮ್ಮದೇ ಆದ ನಮ್ಮತನವನ್ನು ಕಂಡುಕೊಳ್ಳಬಹುದು. ಆ ಶಕ್ತಿಯನ್ನು ವಿಕಾಸಗೊಳಿಸಿ ದೇಶದ ಪ್ರಗತಿಯನ್ನು ಸಾಧಿಸಬಹುದು. ಈ ಎಲ್ಲಾ ಲಾಭಗಳನ್ನು ಪಡೆಯಬಹುದಾಗಿದೆ. | |
| 28. | ರೈತನು ದನಕರುಗಳು ಹೇಗಾದವೆಂದು ಮಳೆರಾಯನಲ್ಲಿ ನಿವೇದಿಸಿಕೊಳ್ಳುತ್ತಾನೆ ?<br>***ಉತ್ತರ :***<br>ರಕ್ಷಿಸುವವರಿಲ್ಲದೆ ಈ ಭೂಮಿ ಸಂಪೂರ್ಣವಾಗಿ ಒಣಗಿ ಹೋಗಿದೆ. ದನಕರುಗಳಿಗೆ ಮೇವಿಲ್ಲದೆ ಬಡಕಲಾಗಿವೆ. ಇದರಿಂದ ಎಲ್ಲರ ಜೀವನವು ಕಷ್ಟಕರವಾಗಿದೆ. ಆದ್ದರಿಂದ ಮಳೆರಾಯನೇ ಮಳೆಯನ್ನು ಸುರಿಸಿ ನಮ್ಮೆಲ್ಲರನ್ನು ಕಾಪಾಡೆಂದು ರೈತನು ನಿವೇದನೆ ಮಾಡಿಕೊಳ್ಳುತ್ತಾನೆ. | |
| 29. | ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭವೇನು ?<br>***ಉತ್ತರ :***<br>ಸ್ವಾತಿಮಳೆ ಬೆಟ್ಟದ ಮೇಲೆ ಜಾಸ್ತಿ ಬಿದ್ದರೆ, ಸಾವಿರಾರು ಕೆರೆಗಳು ತುಂಬುತ್ತವೆ. ಕುಣಿಗಲು ಕೆರೆಯಲ್ಲಿ ಮೀನುಗಳ ಸಂತತಿ ವೃದ್ಧಿಸುತ್ತವೆ. ರೈತನು ತನ್ನ ಮುಂದಿನ ಹೊಲದ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 30. | ಈರಪ್ಪ ಎಂ. ಕಂಬಳಿಯವರು ಮುಂಡರಗಿಗೆ ಹೋಗಲು ಕೊಪ್ಪಳದ ಮಾರ್ಗವನ್ನು ಏಕೆ ಆಯ್ಕೆ ಮಾಡಿಕೊಂಡರು ? | |
| | ***ಉತ್ತರ :*** | |
| | ಕೊಪ್ಪಳ ಹೊಸದಾಗಿ ಸಾರಿಗೆ ಡಿಪೋ ಹೊಂದಿದ್ದು ಇತ್ತೀಚೆಗೆ ಜಿಲ್ಲಾ ಕೇಂದ್ರ ಸ್ಥಳವೆಂಬ ಕಿರೀಟ ಬೇರೆ ಹೊಂದಿತ್ತು. ಅದೂ ಅಲ್ಲದೆ ಅವರು ಅದೇ ಜಿಲ್ಲೆಯವರಾಗಿದ್ದರಿಂದ ಈರಪ್ಪ ಎಂ. ಕಂಬಳಿಯವರು ಮುಂಡರಗಿಗೆ ಹೋಗಲು ಕೊಪ್ಪಳದ ಮಾರ್ಗವನ್ನು ಆಯ್ದುಕೊಂಡರು. | |
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈ ಬಿಡುವಂತಿಲ್ಲ". | |
| | ***ಉತ್ತರ :*** | |
| | ಈ ಮೇಲಿನ ವಾಕ್ಯವನ್ನು 'ಲಾಕಪ್ಪಿನಲ್ಲಿ ಒಂದು ರಾತ್ರಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪಾಠವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರು ರಚಿಸಿದ 'ಅಮೆರಿಕದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆಯ್ದುಕೊಳ್ಳಲಾಗಿದೆ. | |
| | ಈ ಮಾತನ್ನು ಪೊಲೀಸಿನವನು ಗೊರೂರರಿಗೆ ಹೇಳಿದುದು. ಗೊರೂರರು ಅಮೆರಿಕದಲ್ಲಿ ದಾರಿ ತಪ್ಪಿದಾಗ ಏನು ಮಾಡಬೇಕೆಂದು ತೋಚದಿದ್ದಾಗ ತಮ್ಮ ಕಷ್ಟವನ್ನು ಪೊಲೀಸಿನವನ ಮುಂದೆ ಹೇಳಿಕೊಂಡಾಗ ಪೊಲೀಸಿನವನು ಈ ಮಾತನ್ನು ಹೇಳಿದನು. | |
| | ಅಮೆರಿಕಾದ ಪೊಲೀಸಿನವನ ಕರ್ತವ್ಯ ಪ್ರಜ್ಞೆಯನ್ನು ಕಾಣಬಹುದು. | |
| 32. | "ಸಾಕು ಮಾಡಿರಿ ನಿಮ್ಮ ಪುರಾಣ" | |
| | ***ಉತ್ತರ :*** | |
| | ಈ ಮೇಲಿನ ವಾಕ್ಯವನ್ನು 'ಧ್ವಜ ರಕ್ಷಣೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಪಾಠವನ್ನು ಪ್ರೊ. ಎಸ್.ಆರ್. ರೋಹಿಡೇಕರ್ ಅವರು ರಚಿಸಿದ 'ಮೂರು ಏಕಾಂಕ ನಾಟಕಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. | |
| | ಈ ಮಾತನ್ನು ಕುಲಕರ್ಣಿ ಸೋಮಣ್ಣನಿಗೆ ಹೇಳಿದನು. ಸೋಮಣ್ಣನು ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡಿ ಸತ್ತರೆ ನಮ್ಮ ಮುಂದಿನ ಪೀಳಿಗೆ ಜನರು ಆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸುಖವನ್ನು ಅನುಭವಿಸುತ್ತಾರೆ ಎಂದಾಗ ಇಲ್ಲದ ಸ್ವರ್ಗ ನರಕಗಳ ಕಲ್ಪನೆಗಳನ್ನು ಜನರಲ್ಲಿ ತುಂಬಿ ಅವರನ್ನು ಹಾಳು ಮಾಡುತ್ತಿದ್ದೀರಿ ಎಂದು ಕುಲಕರ್ಣಿ ಹೇಳಿದಾಗ ಇಂದಿನ ಈ ಎಲ್ಲಾ ಅನಾಹುತಗಳಿಗೆ ನೀವೇ ಕಾರಣ ಎಂದು ಸೋಮಣ್ಣ ಹೇಳಿದ ಸಂದರ್ಭದಲ್ಲಿ ಬಂದ ಮಾತು. | |
| | ಕುಲಕರ್ಣಿಯ ಅಹಂಕಾರವನ್ನು ಕಾಣಬಹುದು. | |
| 33. | "ಮೌನ ಧ್ಯಾನ ನಿನಗೆ ಊನ ಕುಕಿಲು ಜಾಣ ಕೋಗಿಲೆ" | |
| | ***ಉತ್ತರ :*** | |
| | ಈ ಮೇಲಿನ ವಾಕ್ಯವನ್ನು 'ಕೋಗಿಲೆ' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಈ ಪದ್ಯವನ್ನು ಚೆನ್ನವೀರ ಕಣವಿಯವರು ರಚಿಸಿದ 'ಹೂವು ಹೊರಳುವವು ಸೂರ್ಯನ ಕಡೆಗೆ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. | |
| | ಕವಿ ಕೋಗಿಲೆಯ ಗಾನಕ್ಕೆ ಮೈ ಸೋತು ಕೋಗಿಲೆಯನ್ನು ಕುರಿತು ಹೇಳಿದ ಮಾತು. ನಿನ್ನ ಗಾನದಲ್ಲಿ ಸದಾ ಯಾವಾಗಲೂ ಸಂತೋಷದ ಚಿಲುಮಯನ್ನು ಮತ್ತು ಅಮೃತದ ಸುಧೆಯನ್ನು ಹರಿಸುತ್ತಿರುತ್ತೀಯ. ಆದ್ದರಿಂದ ನೀನು ಮೌನವಾಗಿರುವುದು ನಿನಗೆ ಶೋಭೆಯನ್ನು ನೀಡುವಂತಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಬಂದ ಮಾತು. | |
| | ನಾವು ಸದಾ ಯಾವಾಗಲೂ ಇನ್ನೊಬ್ಬರಿಗೆ ಸಂತೋಷವನ್ನು ನೀಡುವ ಪ್ರಯತ್ನ ಮಾಡಬೇಕು. | |
| 34. | "ಬಡತನಕ್ಕೆ ಉಂಬುವ ಚಿಂತೆ" | |
| | ***ಉತ್ತರ :*** | |
| | ಈ ವಾಕ್ಯವನ್ನು 'ವಚನಗಳು' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದ. ಅಂಬಿಗರ ಚೌಡಯ್ಯ ರಚಿಸಿದ ಈ ವಚನಗಳನ್ನು 'ಗಮಕ ಗಂಗೋತ್ರಿ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. | |
| | ಈ ಮಾತನ್ನು ಅಂಬಿಗ ಚೌಡಯ್ಯ ಓದುಗರಿಗೆ ಹೇಳಿದರು ಮಾನವನ ಆಸೆಗೆ ಕೊನೆಯೆಂಬುದಿಲ್ಲ. ಆಸೆಯ ಮೋಹಕ್ಕೆ ಒಳಗಾಗಿ ನಾನಾ ಚಿಂತೆಗಳಿಗೆ ಮಾನವನು ಗುರಿಯಾಗುತ್ತಾನೆ. ಆತನ ಒಂದು ಚಿಂತೆ ಕಳೆಯುತ್ತಿದ್ದ ಹಾಗೆಯೇ ಮತ್ತೊಂದು ಚಿಂತೆಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಳಗಾಗುತ್ತಾನ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಮನುಷ್ಯನಿಗೆ ಹೊಟ್ಟೆಗೇನಾದರೂ ಸಿಕ್ಕರೆ ಸಾಕು ಎಂದುಕೊಂಡಾಗ, ಹೊಟ್ಟೆ ತುಂಬ ಅನ್ನ ಸಿಕ್ಕೊಡನೆಯೇ ಅವನಿಗೆ ನಾನಾ ಚಿಂತೆಗಳು ಉಂಟಾಗುತ್ತವೆ ಎಂದು ಹೇಳುವಾಗ ಬಂದ ಮಾತು.<br><br>ಚಿಂತೆಗಳಿಗೆ ಕೊನೆಯೇ ಇಲ್ಲ. ಇರುವುದರಲ್ಲಿಯೇ ತೃಪ್ತಿ ಕಾಣಬೇಕು. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಕರ್ನಾಟಕ ವಂಗ ..................................................<br>......................................................................<br>......................................................................<br>............................................................ ಒಂದೆ.<br>**ಅಥವಾ**<br>ನಾವು ನೀವು ......................................................<br>......................................................................<br>......................................................................<br>........................................................... ಇಂದೆ.<br>***ಉತ್ತರ :***<br>ಕರ್ನಾಟಕ ವಂಗ ಆಂಧ್ರ;<br>ಭಾರತೀಯರೊಂದೆ.<br>ಪೂರ್ವೋತ್ತರ ಪಡು ತೆಂಕಣ<br>ಗಾಳಿ ಮುಗಿಲು ಒಂದೆ.<br>**ಅಥವಾ**<br>ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ. | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಾಹಿತಿಗಳ, ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36 | *ಗೊರೂರು ರಾಮಸ್ವಾಮಿ ಅಯ್ಯಂಗಾರ್ :*<br>***ಉತ್ತರ :***<br>ಇವರು ೧೯೦೪ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿದರು. ನಮ್ಮ ಊರಿನ ರಸಿಕರು, ಗರುಡ ಗಂಬದ ದಾಸಯ್ಯ, ಹೇಮಾವತಿ, ಮೆರಣಿಗೆ, ಅಮೆರಿಕದಲ್ಲಿ ಗೊರೂರು, ಬೂತಯ್ಯನ ಮಗ ಅಯ್ಯ, ಹಳ್ಳಿಯ ಹಾಡುಗಳು ಇವರ ಪ್ರಮುಖ ಕೃತಿಗಳು. | |
| 37. | *ಚೆನ್ನವೀರ ಕಣವಿ :*<br>***ಉತ್ತರ :***<br>ಇವರು ಜೂನ್ ೨೮, ೧೯೨೮ ರಂದು ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಆಕಾಶಬುಟ್ಟಿ, ಭಾವಜೀವ, ಜೀವಧ್ವನಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಸಮತೋಲನ ಮತ್ತು ಕಾವ್ಯಾನು ಸಂಧಾನ, ಹೂವು ಹೊರಳುವವು ಸೂರ್ಯನಕಡೆಗೆ ಇವರ ಪ್ರಮುಖ ಕೃತಿಗಳು. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತರಿಸುವುದು :** | $2 \times 4 = 8$ |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 38. | ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರನ್ನು ಎದುರಿಸಿದ ಸಂದರ್ಭವನ್ನು ವಿವರಿಸಿರಿ.<br>***ಅಥವಾ***<br>ಬೆಳವಡಿ ಮಲ್ಲಮ್ಮಜಿ ತನ್ನ ಗಂಡನಿಗೆ ಕೊಟ್ಟ ಮಾತನ್ನು ಹೇಗೆ ಉಳಿಸಿಕೊಂಡಳು ವಿವರಿಸಿರಿ.<br>***ಉತ್ತರ :***<br>ಪೋರ್ಚುಗೀಸರು ಉಲ್ಲಾಳದ ಮೇಲೆ ಆಕ್ರಮಣ ಮಾಡಲು ಕರಾವಳಿಯಲ್ಲಿ ಲಂಗರು ಹಾಕಿದಾಗ, ರಾಣಿ ಅಬ್ಬಕ್ಕದೇವಿಯ ಮೊಗೇರು ಎಂಬ ಸಾಹಸಿ ಮೀನುಗಾರರ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ಸಣ್ಣ ದೋಣಿಗಳಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೋಗಿ, ಸಾವಿರಾರು ತೆಂಗಿನ–ಗರಿಯ ಉರಿಯುವ ದೀವಟಿಕೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ಮೇಲೆಸೆದಾಗ ನೌಕೆಯು ಧಗಧಗನೆ ಹತ್ತಿ ಉರಿಯಲು ಪ್ರಾರಂಭಿಸಿದಾಗ ದಿಕ್ಕೆಟ್ಟ ಪೋರ್ಚುಗೀಸ್ ಸೈನಿಕರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ಸಮುದ್ರಕ್ಕೆ ಹಾರಿದಾಗ ರಾಣಿಯ ಸೈನಿಕರ ಖಡ್ಗ, ಈಟಿಗಳಿಗೆ ಬಲಿಯಾದರು. ಹೀಗೆ ಪೋರ್ಚುಗೀಸರ ಹಡಗನ್ನು ಮುಳುಗಿಸಿ ಮಿರಾಂಡಾ ಮತ್ತು ಡಿಮೆಲ್ಲೊ ಎಂಬ ಸೇನಾಧಿಪತಿಗಳನ್ನು ಓಡಿಸಿ, ರಾಣಿ ಸಪ್ತಸಾಗರದ ಆಚೆ ವಿಖ್ಯಾತಳಾದಳು. ಹೀಗೆ ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರನ್ನು ಎದುರಿಸಿದಳು. | |
| | **ಅಥವಾ** | |
| | ಗಂಡನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ರಾಣಿ ದಿಟ್ಟ ಹೆಜ್ಜೆ ಇಟ್ಟಳು. ಬೆಳವಡಿಯ ಸರದಾರ ಶಾಂತಯ್ಯನನ್ನು ಸಂನ್ಯಾಸಿಯ ವೇಷದಲ್ಲಿ ಶಿವಾಜಿಯ ಹತ್ತಿರ ಕಳಿಸಿದಳು. ಅವನು ಸಿದ್ಧ ಸಮುದ್ರದಲ್ಲಿರುವ ದ್ಯಾಮವ್ವ ಎಂಬ ಜಾಗೃತ ಜಗದಾಂಬೆ ದೇವಿಯ ದರ್ಶನ ಪಡೆದರೆ ಉತ್ತಮ ಎಂದು ತಿಳಿಸಿದನು. ಈ ಸೂಚನೆಗೆ ಶಿವಾಜಿ ಒಪ್ಪಿದರು. ಎಂಟು–ಹತ್ತು ಸರದಾರರೊಂದಿಗೆ ಶಿವಾಜಿಯು ಜಗದಾಂಬೆಯ ದರ್ಶನ ಪಡೆದು ಮರಳುತ್ತಿದ್ದಾಗ ರಾಣಿ ಶಿವಾಜಿಯ ಮೇಲೆ ಮಿಂಚಿನಂತೆ ಎರಗಿ ಖಡ್ಗದ ಹೊಡೆತದಿಂದ ಅವರನ್ನೆಲ್ಲ ನೆಲಕ್ಕುರುಳಿಸಿದಳು. ಹಠಾತ್ತನೆಯ ದಾಳಿಯಿಂದ ಶಿವಾಜಿ ತಲ್ಲಣಗೊಂಡು 'ದೇವಿ ನನ್ನ ಅಪರಾಧವನ್ನು ಕ್ಷಮಿಸು ನಾನು ನಿನ್ನ ಮಗನೆಂದು ತಿಳಿ' ಎಂದು ಬೇಡಿಕೊಂಡು ತನ್ನ ತಪ್ಪನ್ನು ಒಪ್ಪಿಕೊಂಡು ರಾಣಿಗೆ ಶರಣಾದನು. ಹೀಗೆ ರಾಣಿ ಬೆಳವಡಿ ಮಲ್ಲಮ್ಮ ತನ್ನ ಗಂಡನಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಳು. | |
| 39. | 'ದಾಸರ ಪದಗಳು' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಅಥವಾ*** | |
| | ಪುರಂದರದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ವಿವರಿಸಿರಿ. | |
| | ***ಉತ್ತರ :*** | |
| | ದಾಸರು ಮಾನವರಲ್ಲಿ ಉತ್ತಮ ಜೀವನ ಮೌಲ್ಯಗಳನ್ನು ಬೆಳೆಸುವ ಪ್ರಯತ್ನವನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಮಾಡಿದರು. ಮಾನವರಾದ ನಾವು ಪ್ರತಿನಿತ್ಯ ನಾವು ಮಾಡುವ ಕರ್ಮಗಳ ಸರಿ ತಪ್ಪುಗಳನ್ನು ಪರಿಶೀಲಿಸಬೇಕು. ಮಾಡುವ ಕಾರ್ಯಗಳಲ್ಲಿ ಧರ್ಮ ಅಧರ್ಮಗಳನ್ನು ಪರಿಶೀಲಿಸಿ ಆಧರ್ಮದ ಬೇಕುಗಳನ್ನು ಕತ್ತರಿಸಿ ಹಾಕಿ ಸದಾ ಯಾವಾಗಲೂ ನಿರ್ಮಲವಾದ ಮನಸ್ಸಿನಿಂದ ಧರ್ಮದ ಮಾರ್ಗದಲ್ಲಿ ಅ ಭಗವಂತನ ನಾಮಸ್ಮರಣೆ ಮಾಡಬೇಕು. ನಾವು ನಮ್ಮ ಶರೀರದ ಕಾಮನೆಗಳನ್ನು ಮತ್ತು ಮನಸ್ಸಿನ ಆಸೆಗಳನ್ನು ಹಿಡಿತದಲ್ಲಿಟ್ಟುಕೊಂಡು ನಮ್ಮಲ್ಲಿ ನಾವು ಆ ಭಗವಂತನನ್ನು ಕಾಣುವ ಪ್ರಯತ್ನ ಮಾಡಿದರೆ ನಮಗೆ ಮುಕ್ತಿಯು ಒಂದು ಗೇಣಿನಷ್ಟು ಹತ್ತಿರವಾಗುತ್ತದೆ. ಭಗವಂತನ ಭಕ್ತರಿಗೆ ಕೇಡೆಂಬುದಿಲ್ಲ. ಅವರು ಯಾವ ಕಾರಣಕ್ಕೂ ಪಾಪಿಗಳ ಸಹವಾಸವನ್ನು ಮಾಡುವವರಲ್ಲ. ಆದ್ದರಿಂದ ಪ್ರಜ್ಞಾವಂತರೇ ನಮಗೆಲ್ಲ ಆ ಭಗವಂತನೆ ಗತಿ ಎಂದು ದಾಸರು ತಿಳಿಸಿದ್ದಾರೆ.

***ಅಥವಾ***

ಪ್ರತಿನಿತ್ಯ ನಾವು ಮಾಡುವ ಕಾರ್ಯಗಳಲ್ಲಿ ಉತ್ತಮ ಮತ್ತು ಕೆಟ್ಟ ಕೆಲಸಗಳನ್ನು ಬೇರ್ಪಡಿಸಿ ಉತ್ತಮ ಕಾರ್ಯಗಳನ್ನೇ ಮಾಡಬೇಕು. ಅಧರ್ಮದ ಬೇರುಗಳನ್ನು ಬುಡಸಹಿತ ಕಿತ್ತೆಸೆದು ಸದಾ ಯಾವಾಗಲೂ ಧರ್ಮದ ಮಾರ್ಗದಲ್ಲಿಯೇ ನಡೆಯಬೇಕು. ನಿರ್ಮಲವಾದ ಮನಸ್ಸಿನಿಂದ ಒಳ್ಳೆಯ ಕಾರ್ಯಗಳನ್ನು ಮಾಡುತ್ತ ಆ ಭಗವಂತನ ನಾಮಸ್ಮರಣೆಯನ್ನು ಮಾಡಬೇಕು. ನಾವು ಶರೀರದ ಕಾಮನೆಗಳನ್ನು ಹಿಡಿತದಲ್ಲಿಟ್ಟುಕೊಂಡು, ಮನಸ್ಸಿನ ಆಸೆಗಳನ್ನು ಹಿಡಿತದಲ್ಲಿಟ್ಟುಕೊಂಡು ಭಗವಂತನನ್ನು ಕಾಣಬೇಕು. ಈ ಮಾರ್ಗದಲ್ಲಿ ನಾವು ನಡೆದರೆ ಮುಕ್ತಿಯು ಗೇಣಿನಷ್ಟು ಹತ್ತಿರವಾಗುತ್ತದೆ. ಒಳ್ಳೆಯ ಮಾರ್ಗದಲ್ಲಿ ನಡೆಯುವವರಿಗ ಕೇಡೆಂಬುದಿಲ್ಲ. ಅವರು ಕೆಟ್ಟ ಜನರ ಸಹವಾಸವನ್ನು ಮಾಡುವವರಲ್ಲ. ಹೀಗೆ ನಮ್ಮ ಮನಸ್ಸನ್ನು ಶುದ್ಧಿಗೊಳಿಸಬಹುದೆಂದು ಪುರಂದರದಾಸರು ತಿಳಿಸಿದ್ದಾರೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 40. | 'ಬಿನದ' ಪದದ ತತ್ಸಮ ರೂಪ | |
| | (ಎ) ವಿಹಾರ (ಬಿ) ಬಿಹಾರ | |
| | (ಸಿ) ವಿನೋದ (ಡಿ) ವಿನಯ | |
| | ***ಉತ್ತರ :*** (ಸಿ) ವಿನೋದ | |
| 41. | ಸಪ್ತಮಿ ವಿಭಕ್ತಿ ಪ್ರತ್ಯಯ | |
| | (ಎ) ಅಲ್ಲಿ (ಬಿ) ದೆಸೆಯಿಂದ | |
| | (ಸಿ) ಅನ್ನು (ಡಿ) ಅ | |
| | ***ಉತ್ತರ :*** (ಎ) ಅಲ್ಲಿ | |
| 42. | 'ಹೃದಯ ಕಮಲ' ಇಲ್ಲಿರುವ ಅಲಂಕಾರ | |
| | (ಎ) ಉಪಮಾನ (ಬಿ) ಉತ್ಪ್ರೇಕ್ಷೆ | |
| | (ಸಿ) ಲುತ್ತೋಪಮ (ಡಿ) ರೂಪಕ | |
| | ***ಉತ್ತರ :*** (ಡಿ) ರೂಪಕ | |
| 43. | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ | |
| | (ಎ) ಸಾಮಾನ್ಯ (ಬಿ) ಮಿಶ್ರ | |
| | (ಸಿ) ದ್ವಂದ್ವ (ಡಿ) ಸಂಯೋಜಿತ | |
| | ***ಉತ್ತರ :*** (ಬಿ) ಮಿಶ್ರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | ಕ್ರಿಯಾ ಪದದ ಮೂಲರೂಪ<br>(ಎ) ಧಾತು (ಬಿ) ನಾಮಪ್ರಕೃತಿ<br>(ಸಿ) ವ್ಯಂಜನ (ಡಿ) ಗುಣಿತಾಕ್ಷರ<br>***ಉತ್ತರ :*** (ಎ) ಧಾತು | |
| 45. | ನಾಮಪದದ ಬದಲಾಗಿ ಬಳಸುವ ಪದ<br>(ಎ) ಗುಣವಾಚಕ (ಬಿ) ಸರ್ವನಾಮ<br>(ಸಿ) ವಿಭಕ್ತಿ (ಡಿ) ನಾಮಪ್ರಕೃತಿ<br>***ಉತ್ತರ :*** (ಬಿ) ಸರ್ವನಾಮ | |
| 46. | ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸುವಾಗ ಬಳಸುವ ಲೇಖನ ಚಿಹ್ನೆ<br>(ಎ) ವಿವರಣಾತ್ಮಕ (ಬಿ) ಭಾವಸೂಚಕ<br>(ಸಿ) ಉದ್ಧರಣ (ಡಿ) ಅಲ್ಪವಿರಾಮ<br>***ಉತ್ತರ :*** (ಸಿ) ಉದ್ಧರಣ | |
| 47. | 'ಭೂಮಿ' ಪದದ ಸಮಾನಾರ್ಥಕ ರೂಪ<br>(ಎ) ಬೆಳೆ (ಬಿ) ಕಳೆ<br>(ಸಿ) ಇಳೆ (ಡಿ) ಮಳೆ<br>***ಉತ್ತರ :*** (ಸಿ) ಇಳೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | ರಮ್ಯ ಹಾಲನ್ನು ಕುಡಿದಳು. ಈ ವಾಕ್ಯದಲ್ಲಿರುವ ಕ್ರಿಯಾಪದದ ಕಾಲರೂಪ<br>(ಎ) ಅಪೂರ್ಣ ವರ್ತಮಾನ (ಬಿ)ವರ್ತಮಾನಕಾಲ<br>(ಸಿ) ಭವಿಷ್ಯತ್ ಕಾಲ (ಡಿ) ಭೂತಕಾಲ<br>***ಉತ್ತರ :*** (ಡಿ) ಭೂತಕಾಲ | |
| 49. | ಮಕ್ಕಳು ಬೇಗಬೇಗನೆ ಶಾಲೆಗೆ ಬರುವಾಗ ಢಣಢಣ ಘಂಟೆ ಬಾರಿಸಿತು. ಈ ವಾಕ್ಯದಲ್ಲಿರುವ ದ್ವಿರುಕ್ತಿ<br>(ಎ) ಬೇಗಬೇಗ (ಬಿ) ಶಾಲೆಗೆ ಬರುವಾಗ<br>(ಸಿ) ಢಣಢಣ (ಡಿ) ಬಾರಿಸಿತು<br>***ಉತ್ತರ :*** (ಎ) ಬೇಗಬೇಗ | |
| 50. | 'ಧರ್ಮ' ಪದದ ವಿರುದ್ಧಾರ್ಥಕ ರೂಪ<br>(ಎ) ಪರಧರ್ಮ (ಬಿ) ಸ್ವಧರ್ಮ<br>(ಸಿ) ಸದ್ಧರ್ಮ (ಡಿ) ಅಧರ್ಮ<br>***ಉತ್ತರ :*** (ಡಿ) ಅಧರ್ಮ | |
| 51. | 'ರಾಜ್ಯೋತ್ಸವ' ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ ?<br>(ಎ) ಗುಣ ಸಂಧಿ (ಬಿ) ವೃದ್ಧಿ ಸಂಧಿ<br>(ಸಿ) ಯಣ್ ಸಂಧಿ (ಡಿ) ಲೋಪ ಸಂಧಿ<br>***ಉತ್ತರ :*** (ಎ) ಗುಣ ಸಂಧಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | $4 \times 1 = 4$ |
| | ಬಹುತೇಕ ವಿದ್ಯಾರ್ಥಿಗಳು ತಮ್ಮ ವಿಫಲತೆಗೆ ಮನಸ್ಸನ್ನು ದೂರುತ್ತಾರೆ. 'ಮನಸ್ಸು ದುರ್ಬಲವಾಗಿದೆ, ಮನಸ್ಸು ಏಕಾಗ್ರತೆಗೊಳ್ಳುತ್ತಿಲ್ಲ' – ಇದು ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ. ಮನಸ್ಸು ನಮ್ಮ ಅಂಕಿತದಲ್ಲಿರಬೇಕಾದ ಒಂದು ಸಾಧನವೇ ಹೊರತು ಮನಸ್ಸು ಆಡಿದಂತೆ ನಾವು ನಡೆಯಬೇಕಾಗಿಲ್ಲ ಎಂಬ ಅರಿವು ಮೂಡಿದಾಗ ಈ ಸಮಸ್ಯೆಗೆ ಪರಿಹಾರ ದೊರಕುವುದು. ಮನಸ್ಸಿನ ನಿಯಂತ್ರಣ ಸಾಧ್ಯವಾಗುವುದು ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಾವು ಅಭಿವೃದ್ಧಿ ಹೊಂದಿದಾಗ ಮಾತ್ರ. ಚಂಚಲತೆ ಮನಸ್ಸಿನ ಸಹಜಗುಣ. ಅದು ಅದರ ಪ್ರಕೃತಿ ಧರ್ಮ. ಸ್ವಾಮಿ ವಿವೇಕಾನಂದರು ಹೇಳುವಂತೆ ಈ ಪ್ರಕೃತಿಯೊಂದಿಗೆ ಹೋರಾಡುವುದೇ ನಿಜವಾದ ಜೀವನ. ಮನಸ್ಸನ್ನು ನಾವು ದೂರುವ ಬದಲು ಅದರ ಜೊತೆ ಸ್ನೇಹ ಬೆಳೆಸಲು ಪ್ರಯತ್ನಿಸಬೇಕು. ನಮ್ಮ ವಿವೇಚನಾ ಶಕ್ತಿಯನ್ನು ಮತ್ತು ಇಚ್ಛಾಶಕ್ತಿಯನ್ನು ಉಪಯೋಗಿಸಿ, ಮನಸ್ಸು ನಮ್ಮ ಮಾತನ್ನು ಕೇಳುವಂತೆ ಮಾಡಬಹುದು. | |
| 52. | ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ ಯಾವುದು ? | |
| | ***ಉತ್ತರ :*** | |
| | ಮನಸ್ಸು ದುರ್ಬಲವಾಗಿದೆ, ಏಕಾಗ್ರತೆಗೊಳ್ಳುತ್ತಿಲ್ಲ ಎಂದು ತಮ್ಮ ವಿಫಲತೆಗೆ ಮನಸ್ಸನ್ನು ದೂರುವುದು ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ. | |
| 53. | ಮನಸ್ಸಿನ ನಿಯಂತ್ರಣ ಯಾವಾಗ ಸಾಧ್ಯ ? | |
| | ***ಉತ್ತರ :*** | |
| | ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಾವು ಅಭಿವೃದ್ಧಿ ಹೊಂದಿದಾಗ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಹುದು. | |
| 54. | ಸ್ವಾಮಿ ವಿವೇಕಾನಂದರು ಹೇಳುವಂತೆ ನಿಜವಾದ ಜೀವನ ಯಾವುದು ? | |
| | ***ಉತ್ತರ :*** | |
| | ಚಂಚಲ ಮನಸ್ಸಿನ ಸಹಜಗುಣದೊಂದಿಗೆ ಹೋರಾಡುವುದೇ ನಿಜವಾದ ಜೀವನ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | ಮನಸ್ಸು ನಮ್ಮ ಮಾತನ್ನು ಕೇಳುವಂತೆ ಹೇಗೆ ಮಾಡಬಹುದು ?<br>***ಉತ್ತರ :***<br>ನಮ್ಮ ವಿವೇಚನಾ ಶಕ್ತಿಯನ್ನು ಮತ್ತು ಇಚ್ಛಾಶಕ್ತಿಯನ್ನು ಉಪಯೋಗಿಸಿ ಮನಸ್ಸು ನಮ್ಮ ಮಾತನ್ನು ಕೇಳುವಂತೆ ಮಾಡಬಹುದು. | |
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>✳ ದೇಶ ಸುತ್ತು; ಕೋಶ ಓದು<br>✳ ಬೆಳೆಯುವ ಪೈರು ಮೊಳಕೆಯಲ್ಲಿ<br>✳ ಕೈ ಕೆಸರಾದರೆ; ಬಾಯಿ ಮೊಸರು<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಭಾಷಾ ಶುದ್ಧಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 57. | **ಪತ್ರ ಲೇಖನ ಬರೆಯುವುದು :**<br>ನಿಮ್ಮನ್ನು ಮಂಗಳೂರಿನ ಹಂಪನಕಟ್ಟೆ ಬಡವಾಣೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ರಮೇಶ' ಎಂದು ಭಾವಿಸಿಕೊಂಡು, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೀವು ನಡೆಸುತ್ತಿರುವ ಸಿದ್ಧತೆಗಳನ್ನು ಕುರಿತು ಬೆಂಗಳೂರಿನಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ.<br>***ಅಥವಾ***<br>ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ 'ಮಹೇಶ್ವರಿ' ಎಂದು ಭಾವಿಸಿ, ನಿಮ್ಮ ವರ್ಗಾವಣೆ ಪತ್ರ ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೊಂದು ಅರ್ಜಿ ಬರೆಯಿರಿ.<br>***ಉತ್ತರ :***<br>*ವೈಯಕ್ತಿಕ ಪತ್ರ :* | 1 × 4 = 4 |
| | ಇಂದ ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | 1 × 4 = 4 |
| | ∗ ಜಲಮಾಲಿನ್ಯಕ್ಕೆ ಕಾರಣಗಳು | |
| | ∗ ದೂರದರ್ಶನ | |
| | ∗ ಸ್ವಾತಂತ್ರ್ಯ ದಿನಾಚರಣೆ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |